**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಮಾರುಕಟ್ಟೆ/ಕ್ಷೀ.ಭಾ./ಟೆಂಡರ್/7992/2018–19 ದಿನಾಂಕ: 16.01.2019

**–: *ಕ್ಷೀರಭಾಗ್ಯ ಯೋಜನೆಯಡಿ ಹಾಲಿನ ಪುಡಿ ಸಾಗಾಣಿಕೆ ಮಾಡಲು ಒಂದು ವರ್ಷ ಅವಧಿಗೆ ಗುತ್ತಿಗೆ ಆಧಾರದಲ್ಲಿ ಹಾಗೂ ಹಾಲು ವಿತರಣಾ ಮಾರ್ಗಗಳಿಗೆ ಎರಡು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ವಾಹನಗಳನ್ನು ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ* :–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ **"ಕ್ಷೀರಭಾಗ್ಯ"** ಯೋಜನೆಯಡಿ **ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ ಹಾಗೂ ಹರಪನಹಳ್ಳಿ ತಾಲ್ಲೂಕು ಕೇಂದ್ರಗಳಿಂದ** ಆಯಾ ತಾಲ್ಲೂಕಿನ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡಲು ಹಾಗೂ **ಪ್ಯಾಕಿಂಗ್ ಕೇಂದ್ರಗಳಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು** ಒಂದು ವರ್ಷದ ಅವಧಿಗೆ, ಗುತ್ತಿಗೆ ಆಧಾರದ ಮೇಲೆ ಹಾಗೂ ಹಾಲು ವಿತರಣಾ ಮಾರ್ಗಗಳಿಗೆ ***ಎರಡು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ವಾಹನಗಳನ್ನು*** ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು, ಆಸಕ್ತರು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | ದಿನಾಂಕ: 23.01.2019 ರಿಂದ |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 15.02.2019 ರಂದು ಸಂಜೆ: 17.30 ಗಂಟೆಯವರೆಗೆ |
| 3 | ಟೆಕ್ನಿಕಲ್ ಟೆಂಡರ್ ತೆರೆಯುವ ದಿನ | ದಿನಾಂಕ: 18.02.2019 ರಂದು ಬೆಳಿಗ್ಗೆ: 11.30 ಗಂಟೆಗೆ |
| 4 | ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ | ದಿನಾಂಕ: 21.02.2019 ರಂದು ಬೆಳಿಗ್ಗೆ: 11.30 ಗಂಟೆಗೆ |

## I. ಹಾಲಿನಪುಡಿ ಮಾರ್ಗಗಳ ವಿವರ (ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ) :–

| ಕ್ರ.ಸಂ | ಮಾರ್ಗಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. | ಶಾಲೆಗಳ ಸಂಖ್ಯೆ (ಅಂದಾಜು) | ಮಾಹೆಯಾನ ಅಂದಾಜು ಹಾಲಿನಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) |
|---|---|---|---|---|---|
| 1 | ಹೊನ್ನಾಳಿ ತಾಲ್ಲೂಕು ಕೇಂದ್ರದಿಂದ ಹೊನ್ನಾಳಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 25,000/- | 50,000/- | 268 | 7800 |
| 2 | ಚನ್ನಗಿರಿ ತಾಲ್ಲೂಕು ಕೇಂದ್ರದಿಂದ ಚನ್ನಗಿರಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 25,000/- | 50,000/- | 355 | 9200 |
| 3 | ಹರಪನಹಳ್ಳಿ ತಾಲ್ಲೂಕು ಕೇಂದ್ರದಿಂದ ಹರಪನಹಳ್ಳಿ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 25,000/- | 50,000/- | 330 | 12000 |
| 4 | ದಾವಣಗೆರೆ ತಾಲ್ಲೂಕು ಕೇಂದ್ರದಿಂದ ದಾವಣಗೆರೆ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 25,000/- | 50,000/- | 470 | 15500 |
| 5 | ಹರಿಹರ ತಾಲ್ಲೂಕು ಕೇಂದ್ರದಿಂದ ಹರಿಹರ ತಾಲ್ಲೂಕಿನ ಶಾಲೆಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವುದು | 25,000/- | 50,000/- | 198 | 8500 |

ಮುಂದುವರೆದಿದೆ. . . . . . .

## II. ಹಾಲಿನ ಪುಡಿ ಸಾಗಾಣಿಕೆ ವಿವರಗಳು (ಪ್ಯಾಕಿಂಗ್ ಕೇಂದ್ರದಿಂದ ತಾಲ್ಲೂಕು ಕೇಂದ್ರಗಳಿಗೆ) :-

ಪ್ಯಾಕಿಂಗ್ ಕೇಂದ್ರಗಳಿಂದ ಈ ಕೆಳಗೆ ನಮೂದಿಸಿರುವ ಮೂರು ಜಿಲ್ಲೆಯ ವ್ಯಾಪ್ತಿಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ/ ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ ಹಾಲಿನ ಪುಡಿ ಸರಬರಾಜು ಮಾಡಬೇಕಾದ ವಿವರಗಳು :-

| ಕ್ರ.ಸಂ | ಪ್ಯಾಕಿಂಗ್ ಕೇಂದ್ರಗಳು ಇರುವ ಸ್ಥಳ | ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದ ತಾಲ್ಲೂಕುಗಳ ಹೆಸರು | ಇ.ಎಂ.ಡಿ. ರೂ. | ಭದ್ರತಾ ಠೇವಣಿ ರೂ. | ಮಾಹೆಯಾನ ಅಂದಾಜು ಹಾಲಿನ ಪುಡಿಯ ಸಾಗಾಣಿಕೆ ಪರಿಮಾಣ (ಕೆ.ಜಿ.ಗಳಲ್ಲಿ) |
|---|---|---|---|---|---|
| 1 | ಶ್ರೀ ರಂಗ ಎಂಟರ್ ಪ್ರೈಸಸ್, ಜೆ.ಪಿ ನಗರ, ಬೆಂಗಳೂರು. | ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 40,000/- | 1,50,000/- | 95,000 |
| 2 | ಎಸೆನ್ಷಿಯಲ್ ಫಾರ್ಮ್, ಧಾರವಾಡ | ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಹಾಗೂ ಸಾಗರ,ಸೊರಬ ಮತ್ತು ಶಿಕಾರಿಪುರ ತಾಲ್ಲೂಕು ಕೇಂದ್ರಗಳಿಗೆ | 40,000/- | 1,50,000/- | 95,000 |
| 3 | ಚನ್ನರಾಯಪಟ್ಟಣ | ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಹಾಗೂ ಚನ್ನಗಿರಿ, ಹೊನ್ನಾಳಿ ತಾಲ್ಲೂಕು ಕೇಂದ್ರಗಳಿಗೆ | 40,000/- | 1,50,000/- | 90,000 |

ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳು :- ಶಿವಮೊಗ್ಗ, ಭದ್ರಾವತಿ, ಸಾಗರ, ಶಿಕಾರಿಪುರ,ಸೊರಬ,ಹೊಸನಗರ, ತೀರ್ಥಹಳ್ಳಿ.
ದಾವಣಗೆರೆ ಜಿಲ್ಲೆಯ ತಾಲ್ಲೂಕುಗಳು :- ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ, ಹರಪನಹಳ್ಳಿ, ಜಗಳೂರು.
ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳು :- ಚಿತ್ರದುರ್ಗ,ಚಳ್ಳಕೆರೆ,ಹಿರಿಯೂರು,ಮೊಳಕಾಲ್ಮೂರು, ಹೊಳಲ್ಕೆರೆ, ಹೊಸದುರ್ಗ.

## III. ಹಾಲು ವಿತರಣಾ ಮಾರ್ಗಗಳ ವಿವರ :-

| ಮಾರ್ಗದ ಸಂಖ್ಯೆ | ಹಾಲು ವಿತರಣಾ ಮಾರ್ಗದ ಹೆಸರು/ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ | ವಾಹನ ಸಾಮರ್ಥ್ಯ (ಕ್ರೇಟುಗಳಲ್ಲಿ) | ದಿನದ ಅಂದಾಜು ಅಂತರ ಕಿ.ಮೀ | ಇ.ಎಂ.ಡಿ ರೂ.ಗಳಲ್ಲಿ | ಭದ್ರತಾ ಠೇವಣಿ ರೂ.ಗಳಲ್ಲಿ |
|---|---|---|---|---|---|
| 1 | **ದಾವಣಗೆರೆ 1 ನೇ ಮಾರ್ಗ** :- ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ದಾವಣಗೆರೆ ನಗರದಲ್ಲಿ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ಅವಶ್ಯವಿದ್ದಲ್ಲಿ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಪಾವತಿಸುವುದು. | 500 ಕ್ರೇಟ್ | 29 ಕಿ.ಮೀ | 25,000/- | 2,50,000/- |
| 2 | **ಹರಿಹರ ಮಾರ್ಗ** :- ದಾವಣಗೆರೆ ಡೈರಿಯಿಂದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ಪಡೆದು ಹರಿಹರ ನಗರದಲ್ಲಿ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ಅವಶ್ಯವಿದ್ದಲ್ಲಿ ನಗದನ್ನು ಸಂಗ್ರಹಿಸಿ ದಾವಣಗೆರೆ ಡೈರಿಗೆ ಪಾವತಿಸುವುದು. | 500 ಕ್ರೇಟ್ | 45 ಕಿ.ಮೀ | 25,000/- | 2,50,000/- |

ಮುಂದುವರೆದಿದೆ. . . . . .

**"ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನಪುಡಿ ಸರಬರಾಜು ಮಾರ್ಗಗಳ ಷರತ್ತು ಮತ್ತು ನಿಬಂಧನೆಗಳು" :–**

1. ಅರ್ಜಿದಾರರು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಕೆ.ಜಿಗೆ ನಮೂದಿಸುವುದು.
2. ಹಾಲಿನ ಪುಡಿಯನ್ನು ತಾಲ್ಲೂಕು ಕೇಂದ್ರಗಳಿಂದ ಶಾಲೆಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮೊತ್ತವು ಸೇರಿರುತ್ತದೆ
3. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ಹಾಲಿನ ಪುಡಿಯನ್ನು ಯಾವುದೇ ವಿಳಂಬ ಮಾಡದೇ ಸರಬರಾಜಿಗೆ ಕ್ರಮವಿಡುವುದು.
4. ಯಶಸ್ವಿಯಾದ ಗುತ್ತಿಗೆದಾರರು ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಹಾಲಿನ ಪುಡಿ ದಾಸ್ತಾನು ಮಾಡುವ ***ಗೋದಾಮಿನ ವಿಳಾಸವನ್ನು*** ನೀಡತಕ್ಕದ್ದು ಹಾಗೂ ***ವಾಣಿಜ್ಯ ತೆರಿಗೆ ಇಲಾಖೆಯಲ್ಲಿ*** ನೊಂದಾಯಿಸಿ ಅಗತ್ಯ ದಾಖಲಾತಿಗಳನ್ನು ಕಡ್ಡಾಯವಾಗಿ ಕಚೇರಿಗೆ ನೀಡತಕ್ಕದ್ದು.
5. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
6. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
7. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನದಲ್ಲಿ ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
8. ಸಾಮಾನ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಪ್ರಸ್ತುತ ಗುತ್ತಿಗೆ ಕರಾರಿನ ಪರಿ ಸಮಾಪ್ತಿಗೊಳಿಸುವಂತಿಲ್ಲ. ಒಂದು ವೇಳೆ ಪ್ರಸ್ತುತ ಕರಾರನ್ನು ಪರಿಸಮಾಪಿಗೊಳಿಸಲು ಬಯಸಿದ್ದಲ್ಲಿ ತಮ್ಮ ಇಂಗಿತವನ್ನು 30 ದಿನಗಳ ಸೂಚನೆಯನ್ನು ಕೊಟ್ಟು ಕಚೇರಿಗೆ ತಿಳಿಸತಕ್ಕದ್ದು. ಅಂತಹ ಸೂಚನೆಯನ್ನು ಒಕ್ಕೂಟವು ಪರಿಶೀಲಿಸಿ ಪ್ರತಿಶತ 50 ರವರೆಗೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರಿಕೆಯನ್ನು ರದ್ದುಪಡಿಸಲಾಗುವುದು.
9. ಹಾಲಿನ ಪುಡಿಯನ್ನು ಕಳುಹಿಸಿದ 5 ದಿನದೊಳಗೆ ಆಯಾ ತಾಲ್ಲೂಕಿನ ಎಲ್ಲಾ ಶಾಲೆಗಳಿಗೆ ಸರಬರಾಜು ಮಾಡುವುದು ಇಲ್ಲವಾದಲ್ಲಿ ಸೂಕ್ತ ದಂಡವನ್ನು ವಿಧಿಸಲಾಗುವುದು.
10. ಹಾಲಿನಪುಡಿ ಸರಬರಾಜು ಆಗಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಯರಿಂದ ಸಹಿ ಮತ್ತು ಮೊಹರು ಹೊಂದಿರುವ ಸ್ವೀಕೃತಿ ಪತ್ರವನ್ನು ಪಡೆದು ತಪ್ಪದೇ ಕಚೇರಿಗೆ ಸಲ್ಲಿಸುವುದು ಹಾಗೂ ಹಾಲಿನ ಪುಡಿ ಶಾಲೆಗಳಿಗೆ ತಲುಪಿರುವ ಬಗ್ಗೆ ಸಹಾಯಕ ನಿರ್ದೇಶಕರವರಿಂದ ಧೃಡಿಕರಣವನ್ನು ಪಡೆದು ಕಚೇರಿಗೆ ಸಲ್ಲಿಸುವುದು.
11. ಸೂಚನಾಪತ್ರದಲ್ಲಿ ನಿಗದಿಪಡಿಸಿರುವಂತೆ ಸಕಾಲದಲ್ಲಿ ಗುತ್ತಿಗೆ ಆದೇಶ ಪಡೆದು ಗುತ್ತಿಗೆ ಕಾರ್ಯಗತಗೊಳಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
12. ಅಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ.
13. ಯಶಸ್ವಿಯಾದ ಗುತ್ತಿಗೆದಾರರು ಎರಡು ಭಾವಚಿತ್ರ, ಆದಾಯ ತೆರಿಗೆ, ಪಾನ್ ಕಾರ್ಡ್, ಆಧಾರ್ ಕಾರ್ಡ್/Voter_ID ಜೆರಾಕ್ಸಗಳ ಪ್ರತಿಯನ್ನು ಸಲ್ಲಿಸಿವುದು.
14. ಯಶಸ್ವಿಯಾದ ಗುತ್ತಿಗೆದಾರರು **ಎಫ್.ಎಸ್.ಎಸ್.ಎ.ಐ** ಲೈಸೆನ್ಸ್‌ನ್ನು ಪಡೆದು ಕಡ್ಡಾಯವಾಗಿ ಕಚೇರಿಗೆ ಸಲ್ಲಿಸುವುದು.
15. ಡೀಸೆಲ್ ದರವು ಹೆಚ್ಚು ಅಥವಾ ಕಡಿಮೆಯಾದಲ್ಲಿ ಸಾಗಾಣಿಕೆ ದರ ಪರಿಷ್ಕರಿಸಲಾಗುವುದಿಲ್ಲಾ.

ಮುಂದುವರೆದಿದೆ....

16. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಸರ್ಕಾರ/ಒಕ್ಕೂಟವು ಹೊರಡಿಸುವ ನಿಯನಗಳೇನಾದರೂ ಬಂದಲ್ಲಿ ತಮಗೂ ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು.
17. ಸಾಗಾಣಿಕೆ ಬಿಲ್ಲನ್ನು ***ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ*** ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
18. ಯಾವುದಾದರೂ ತಂಟೆ ತಕರಾರುಗಳು ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥ ಮಾಡಿಕೊಳ್ಳುವುದು.
19. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಪುಸ್ತಕದಲ್ಲಿ ಲಭ್ಯವಿರುತ್ತದೆ.
20. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಪುಸ್ತಕದಲ್ಲಿ ಲಭ್ಯವಿರುತ್ತದೆ.
21. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
22. **"ಕ್ಷೀರಭಾಗ್ಯ"** ಯೋಜನೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಒಕ್ಕೂಟದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರವು ಯಾವುದೇ ಹಂತದಲ್ಲಿ ಯೋಜನೆಯನ್ನು ನಿಲ್ಲಿಸಿದ್ದಲ್ಲಿ ಅಥವಾ ಯಾವುದೇ ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಅನುಗುಣವಾಗಿ ಕ್ರಮವಿಡಲಾಗುವುದು.

## "ಕ್ಷೀರ ಭಾಗ್ಯ ಯೋಜನೆಯಡಿ ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡುವ ಷರತ್ತು ಮತ್ತು ನಿಬಂಧನೆಗಳು" :–

1. ಯಶಸ್ವಿ ಟೆಂಡರ್‌ದಾರರು ಚನ್ನರಾಯಪಟ್ಟಣ, ಬೆಂಗಳೂರು, ಮತ್ತು ಧಾರಾವಾಡ ಕಹಾಮ ನಿಗದಿಪಡಿಸಿದ ಪ್ಯಾಕಿಂಗ್ ಕೇಂದ್ರಗಳಿಂದ ಕೆನೆಭರಿತ ಹಾಲಿನ ಪುಡಿಯನ್ನು ಎತ್ತುವಳಿ ಮಾಡಿ ಸಂಬಂದಪಟ್ಟ ತಾಲ್ಲೂಕುಗಳಲ್ಲಿನ ಸರ್ಕಾರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆ ಗೋದಾಮುಗಳಿಗೆ / ಎಲ್ಲಾ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಗೋದಾಮುಗಳಿಗೆ ಸಾಗಾಣಿಕೆ ಮಾಡುವುದು.
2. ಹಾಲಿನ ಪುಡಿ ಪ್ರಮಾಣದಲ್ಲಿ ಸಿ.ಡಿ.ಪಿ.ಓ ಕಚೇರಿ / ಶಾಲೆಗಳ ಬೇಡಿಕೆಗಳಿಗನುಸಾರ ಕಾಲ ಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ.
3. ಟೆಂಡರ್‌ನಲ್ಲಿ ನಿಗದಿಯಾಗುವ ಸಾಗಾಣಿಕೆ ದರವು ಲೋಡಿಂಗ್ ಮತ್ತು ಅನ್ ಲೋಡಿಂಗ್ ವೆಚ್ಚ ಸೇರಿರುತ್ತದೆ.
4. ಅರ್ಜಿದಾರರು ಪ್ಯಾಕಿಂಗ್ ಕೇಂದ್ರಗಳಿಂದ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸರಬರಾಜು ಮಾಡಲು 6 ಟನ್‌ವರೆಗೆ, 6 ರಿಂದ 10 ಟನ್‌ವರೆಗೆ ಹಾಗೂ 10 ಟನ್ ಮೇಲ್ಪಟ್ಟು ಪ್ರತಿ ಟನ್‌ಗೆ ಸಾಗಾಣಿಕೆ ದರವನ್ನು ನಮೂದಿಸತಕ್ಕದ್ದು.
5. ಕೆನೆಭರಿತ ಹಾಲಿನ ಪುಡಿಯನ್ನು 500 ಗ್ರಾಂ ಪ್ಯಾಕ್ ಹಾಗೂ 1 ಕೆ.ಜಿ ಪ್ಯಾಕ್‌ನ 25/20 ಕೆ.ಜಿ ಚೀಲಗಳಲ್ಲಿ ಎತ್ತುವಳಿ ಮಾಡಬೇಕಾಗಿರುತ್ತದೆ.
6. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನದಲ್ಲಿ ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.

ಮುಂದುವರೆದಿದೆ....

7. ಕೆಲವೊಮ್ಮೆ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳವರ ಕಚೇರಿಯಿಂದ / ಜಿಲ್ಲಾ ಪಂಚಾಯತ್ ಅಕ್ಷರ ದಾಸೋಹ ಇಲಾಖೆಯವರಿಂದ ಬರುವ ಬೇಡಿಕೆ ಪ್ರಕಾರ 2 ತಿಂಗಳ ಬೇಡಿಕೆ ಕೆನೆಭರಿತ ಹಾಲಿನ ಪುಡಿಯನ್ನು ಒಂದೇ ತಿಂಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಕೇಂದ್ರಗಳಿಗೆ ಸಾಗಾಣಿಕೆ ಮಾಡಬೇಕಾಗಿರುವುದರಿಂದ ಎತ್ತುವಳಿ ಪ್ರಮಾಣದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ.
8. ಹಾಲಿನ ಪುಡಿ ಪ್ಯಾಕಿಂಗ್ ಕೇಂದ್ರಗಳಿಂದ ನಿಗದಿತ ದಿನಾಂಕದಂದು ಹಾಲಿನ ಪುಡಿ ಲೋಡ್ ಸಿಗದೇ ಇರುವ ಸಂದರ್ಭಗಳಲ್ಲಿ ಖಾಲಿ ವಾಹನ ಲೋಡಿಂಗ್ ಆಗಬೇಕಾಗಿರುವ ಸ್ಥಳದಲ್ಲೇ ಕಾಯಬೇಕಾಗಿದ್ದು, ಇದಕ್ಕೆ ಹೆಚ್ಚುವರಿ ಮೊತ್ತ ಪಾವತಿಸಲು ಅವಕಾಶವಿರುವುದಿಲ್ಲ.
9. ಒಕ್ಕೂಟದ ಆಯಾ ಜಿಲ್ಲಾ ಹಾಗೂ ತಾಲ್ಲೂಕು ನೋಡಲ್ ಅಧಿಕಾರಿಗಳು ಕಾಲಕಾಲಕ್ಕೆ ಸೂಚಿಸುವ ಸಮಯಕ್ಕೆ ವಾಹನವನ್ನು ಒದಗಿಸುವುದು ಹಾಗೂ ಸೂಚಿಸುವ ಸ್ಥಳಕ್ಕೆ / ತಾಲ್ಲೂಕುಗಳಿಗೆ ಸಕಾಲಕ್ಕೆ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು ವಾಹನ ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಇಲ್ಲವಾದಲ್ಲಿ ಸೂಕ್ತ ದಂಡ ವಿಧಿಸಲಾಗುವುದು.
10. ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಪಡೆದು ಸುರಕ್ಷಿತವಾಗಿ ಒಕ್ಕೂಟದಿಂದ ಸೂಚಿಸುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಸರಬರಾಜು ಮಾಡುವುದು. ಈ ಸಂಬಂಧ ಡ್ಯಾಮೇಜ್ ಅಥವಾ ಇನ್ನಾವುದೇ ದೂರುಗಳು ಬಂದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ ಹಾಗೂ ಸದರಿ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಟಾಯಿಸಲಾಗುವುದು.
11. ಕೆನೆಭರಿತ ಹಾಲಿನ ಪುಡಿಯನ್ನು ಪ್ಯಾಕಿಂಗ್ ಕೇಂದ್ರಗಳಿಂದ ಸೂಚಿಸುವ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ / ಸಿ.ಡಿ.ಪಿ.ಓ ಕಚೇರಿ ಗೋದಾಮುಗಳಿಗೆ / ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ತಲುಪಿಸಿ ಇಲಾಖೆಯ ಡೆಸಿಗ್ನೇಟೆಡ್ ಅಧಿಕಾರಿಗಳಿಂದ / ಗುತ್ತಿಗೆದಾರರಿಂದ ತಪ್ಪದೆ ಸಹಿ ಹಾಗೂ ಮೊಹರು ಹೊಂದಿರುವ ಸ್ವೀಕೃತಿಯನ್ನು ಪಡೆದು ಅದನ್ನು ಒಕ್ಕೂಟಕ್ಕೆ ಸಲ್ಲಿಸಬೇಕಾಗಿರುತ್ತದೆ.
12. ಲೋಡ್‌ನಲ್ಲಿ 2 ಅಥವಾ ಅದಕ್ಕಿಂತ ಹೆಚ್ಚಿನ ತಾಲ್ಲೂಕು ಕೇಂದ್ರಗಳಿಗೆ ಒಂದೇ ಲೋಡ್‌ನಲ್ಲಿ ಹಾಲಿನ ಪುಡಿ ಸಾಗಾಣಿಕೆ ಮಾಡಬೇಕಾದಲ್ಲಿ ಹೆಚ್ಚಿನ ಅಂತರವಿರುವ ಕೇಂದ್ರದ ಬಾಡಿಗೆಯನ್ನು ಮಾತ್ರ ಸಾಗಾಣಿಕೆ ಬಿಲ್ ಪಾವತಿಗೆ ಪರಿಗಣಿಸಲಾಗುವುದು ಹಾಗೂ ರೂ. 1500/– ಹೆಚ್ಚುವರಿಯಾಗಿ ಪಾವತಿಸಲಾಗುವುದು.
13. ಹಾಲಿನ ಪುಡಿ ಸಾಗಾಣಿಕೆ ಮಾಡುವ ಸಮಯದಲ್ಲಿ ವಾಹನದ ಜೊತೆಗೆ ಅಗತ್ಯ ದಾಖಲೆ / ಮಾಹಿತಿಯನ್ನು ಕಳುಹಿಸುವಂತೆ ಕ್ರಮವಿಡುವುದು ತಪ್ಪಿದಲ್ಲಿ ಇದರಿಂದಾಗುವ ತೊಂದರೆಗಳಿಗೆ ಸಾಗಾಣಿಕೆ ಗುತ್ತಿಗೆದಾರರೆ ಜವಾಬ್ದಾರರಾಗಿರುತ್ತಾರೆ.
14. ಡೀಸೆಲ್ ದರವು ಹೆಚ್ಚು ಅಥವಾ ಕಡಿಮೆಯಾದಲ್ಲಿ ಸಾಗಾಣಿಕೆ ದರ ಪರಿಷ್ಕರಿಸಲಾಗುವುದಿಲ್ಲ.
15. ನಿಗದಿತ ಅವಧಿಯಲ್ಲಿ ಜಿಲ್ಲಾ/ತಾಲ್ಲೂಕು ಗೋದಾಮುಗಳಿಗೆ/ಅಂಗನವಾಡಿ/ಖಾಸಗಿ ಗುತ್ತಿಗೆದಾರರ ಗೋದಾಮುಗಳಿಗೆ ಹಾಲಿನ ಪುಡಿ ಸರಬರಾಜು ಆಗದೆ ವಾಹನ ಗುತ್ತಿಗೆದಾರರಿಂದ / ವಾಹನಗಳ ತೊಂದರೆಯಿಂದ ವಿಳಂಬವಾದಲ್ಲಿ ಒಕ್ಕೂಟದ ವತಿಯಿಂದ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ದಂಡದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗುವುದು. ಎಲ್ಲ ತಾಲ್ಲೂಕು ಕೇಂದ್ರಗಳಿಗೆ ಸರಬರಾಜು ಆಗಿರುವ ಬಗ್ಗೆ ಸ್ವೀಕೃತಿ ಪತ್ರವನ್ನು ಕಚೇರಿಗೆ ಸಲ್ಲಿಸುವುದು.
16. ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಗುತ್ತಿಗೆದಾರರು ಸಾಗಾಣಿಕೆ ವೆಚ್ಚದ ಬಿಲ್ಲನ್ನು ಒಕ್ಕೂಟಕ್ಕೆ ಸಲ್ಲಿಸುವುದು ಹಾಗೂ ಸಾಗಾಣಿಕೆ ಬಿಲ್ಲಿನಲ್ಲಿ ಪಾನ್ ಸಂಖ್ಯೆ ಮತ್ತು ಬ್ಯಾಂಕ್ ಬ್ರಾಂಚ್‌ನ ಹೆಸರು, ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್‌ನ್ನು ನಮೂದಿಸತಕ್ಕದ್ದು.
17. ಹಾಲಿನ ಪುಡಿ ಸಾಗಾಣಿಕೆ ಗುತ್ತಿಗೆಗೆ ಸಂಬಂಧಿಸಿದಂತೆ ಯಾವುದೇ ದಂಡ/ಕಟಾವಣೆಗಳನ್ನು ಗುತ್ತಿಗೆದಾರರ ಸಾಗಾಣಿಕೆ ಬಿಲ್ ಅಥವಾ ಸದರಿಯವರು ಒಕ್ಕೂಟದಲ್ಲಿ ತೊಡಗಿಸಿರುವ ಭದ್ರತಾ ಠೇವಣಿಯಿಂದ ಕಟಾಯಿಸಿಕೊಳ್ಳಲಾಗುವುದು.
18. ಹಾಲಿನ ಪುಡಿ ಸರಬರಾಜು ವೇಳೆಯಲ್ಲಿ ಹಾಲಿನ ಪುಡಿ ಪ್ಯಾಕೇಟ್ / ಚೀಲಗಳಲ್ಲಿ ಯಾವುದೇ ಷಾರ್ಟೇಜ್ / ಡ್ಯಾಮೇಜು ಆದಲ್ಲಿ ಅದಕ್ಕೆ ಸಾಗಾಣಿಕೆ ಗುತ್ತಿಗೆದಾರರು ಜವಾಬ್ದಾರರಾಗಿರುತ್ತಾರೆ ಹಾಗೂ ಅದರ ಮೊತ್ತವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಟಾಯಿಸಿಕೊಳ್ಳಲಾಗುವುದು.
19. ಯಶಸ್ವಿಯಾದ ಗುತ್ತಿಗೆದಾರರು **ಎಫ್.ಎಸ್.ಎಸ್.ಎ.ಐ** ಲೈಸೆನ್ಸ್‌ನ್ನು ಪಡೆದು ಕಡ್ಡಾಯವಾಗಿ ಕಚೇರಿಗೆ ಸಲ್ಲಿಸುವುದು.

ಮುಂದುವರೆದಿದೆ....

20. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

21. **"ಕ್ಷೀರಭಾಗ್ಯ"** ಯೋಜನೆಯು ಕರ್ನಾಟಕ ಸರ್ಕಾರದ ಯೋಜನೆಯಾಗಿದ್ದು, ಒಕ್ಕೂಟದ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸರ್ಕಾರವು ಯಾವುದೇ ಹಂತದಲ್ಲಿ ಯೋಜನೆಯನ್ನು ನಿಲ್ಲಿಸಿದ್ದಲ್ಲಿ ಅಥವಾ ಯಾವುದೇ ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಅನುಗುಣವಾಗಿ ಕ್ರಮವಿಡಲಾಗುವುದು.

**<u>ಹಾಲು ವಿತರಣಾ ಮಾರ್ಗಗಳ</u> <u>ನಿಬಂಧನೆ ಮತ್ತು ಷರತ್ತುಗಳು ;–</u>**

1. ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು ಹೊಂದಿರತಕ್ಕದ್ದು. ವಾಹನ ಹೊಂದಿಲ್ಲದವರು ಟೆಂಡರ್‌ನಲ್ಲಿ ದರ ಒಪ್ಪಿಗೆಯಾದಲ್ಲಿ ಟೆಂಡರ್ ದರ ಒಪ್ಪಿಗೆ ಆದೇಶ ನೀಡಿದ 30 ದಿನಗಳೊಳಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ವಾಹನವನ್ನು ಖರೀದಿಸಿ ನೀಡುವುದು. ತಪ್ಪಿದ್ದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
2. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.
3. ಕನಿಷ್ಠ ಇ.ಎಂ.ಡಿ. ರೂ. 25,000/– ಆದರೆ ವಿತರಣಾ ಮಾರ್ಗದ ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಮಾವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ವಿತರಣೆ ವಾಹನಕ್ಕೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ.
5. ಹಾಲು ವಿತರಣಾ/ಶೇಖರಣೆ ವಾಹನಗಳು 2010 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು. ಹಳದಿ ಬೋರ್ಡ್ ಹೊಂದಿದ್ದು ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.
6. ಹಾಲು ವಿತರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೊರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
7. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.
8. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.

ಮುಂದುವರೆದಿದೆ....

9. ಹಾಲು ವಿತರಣಾ ಮಾರ್ಗದ ಗುತ್ತಿಗೆದಾರರು ಹಾಲು ಮತ್ತು ಹಾಲಿನ ಉತ್ಪನ್ನಗಳ ಒಟ್ಟು ಮೊತ್ತವನ್ನು ಆಯಾ ದಿನವೇ ನಿಗಧಿತ ವೇಳೆಗೆ ಕಚೇರಿ/ಬ್ಯಾಂಕಿಗೆ ಪಾವತಿಸುವುದು. ಪೂರ್ಣ ಮೊತ್ತ ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ ಮೊದಲ ದಿನ ಹಾಗೂ 2 ನೇ ದಿನದ ಬಾಕಿ ಮೊತ್ತಕ್ಕೆ ಶೇ 2% ರಷ್ಟು ದಂಡದ ಮೊತ್ತವನ್ನು 3 ನೇ ದಿನಕ್ಕೆ ಪಾವತಿಸುವುದು. 3 ನೇ ದಿನವೂ ಬಾಕಿ ಉಳಿಸಿಕೊಂಡಲ್ಲಿ ದಿನದ ಬಾಕಿ ಮೊತ್ತಕ್ಕೆ ಶೇ 18% ರಷ್ಟು ಬಡ್ಡಿ ಸೇರಿಸಿ ಪಾವತಿಸತಕ್ಕದ್ದು ಮತ್ತು ನಂತರವೂ ಪಾವತಿಸದಿದ್ದಲ್ಲಿ ಒಕ್ಕೂಟದ ನಿಯಮಾನುಸಾರ ಗುತ್ತಿಗೆ ರದ್ದುಪಡಿಸಲು ಕ್ರಮವಿಡಲಾಗುವುದು.
10. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ಭವಿಷ್ಯನಿಧಿ/ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.
11. ಯಶಸ್ವಿ ಗುತ್ತಿಗೆದಾರರು ಗುತ್ತಿಗೆ ಪಡೆದ ಒಂದು ತಿಂಗಳೊಳಗಾಗಿ **ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ (FSSAI)** ಪರವಾನಗಿಯನ್ನು ಪಡೆದು ಕಚೇರಿಗೆ ಸಲ್ಲಿಸುವುದು.

**"ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾದುದು."**

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344**. ಮತ್ತು ಒಕ್ಕೂಟದ ವೆಬ್‌ಸೈಟ್ **www.shimul.coop** ಸಂಪರ್ಕಿಸಬಹುದು.

**ಸಹಿ/–**

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ : 16.01.2019
ಸ್ಥಳ : ಶಿವಮೊಗ್ಗ ಡೈರಿ